ಓ.ಎಸ್. ನಂಃ **65/2015**
ಡಿ ಡಬ್ಲ್ಯೂಃ **1**

ದಿನಾಂಕಃ 31-10-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿಯ ಪರ ಶ್ರೀ ಜಿ ಬಿ ಎನ್ ವಕೀಲರಿಂದಃ

ನನಗೆ ಕನ್ನಡ ಹಾಗೂ ಇಂಗ್ಲೀಷ್ ಭಾಷೆ ಓದಲು-ಬರೆಯಲು ಬರುವುದಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಈ ದಾವೆಯ ವಾದಿಗೂ ಹಾಗೂ ನನಗೆ ಜಮೀನು ಮಾರಾಟ ಮಾಡಿದವರಿಗೂ ಸಂಬಂಧ ಇಲ್ಲ ಎಂದು ಪ್ರಮಾಣ ಪತ್ರದಲ್ಲಿ ಬರೆಸಿರುತ್ತೇನೆ. ನನ್ನ ಪ್ರಮಾಣ ಪತ್ರದಲ್ಲಿ ಆ ರೀತಿ ಬರೆಸಿಲ್ಲ ಎಂದರೆ ಸರಿಯಲ್ಲ. ವಾದಿ ಈ ದಾವೆಯನ್ನು ಪಾಲು ವಿಭಾಗಕ್ಕಾಗಿ ದಾಖಲಿಸಿದ್ದಾರೆ ಎಂದರೆ ಸಾಕ್ಷಿಯು ವಾದಿಗೂ ಹಾಗೂ ನನಗೆ ಮಾರಾಟ ಮಾಡಿದ ಜಮೀನಿಗೂ ಸಂಬಂಧ ಇಲ್ಲ ಎಂದು ನುಡಿಯುತ್ತಾರೆ. ವಾದಿ ದಾಖಲಿಸಿರುವ ದಾವೆಯ ಬಗ್ಗೆ ನನಗೆ ಮಾಹಿತಿ ಇಲ್ಲ. ನನಗೆ ದಾವೆಯ ಮಾಹಿತಿ ಇದ್ದರೂ ಸಹ ಮಾಹಿತಿ ಇಲ್ಲ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

2. ಚಂದಪ್ಪ ಹಾಗೂ ಭೀಮಪ್ಪ ಅಣ್ಣ-ತಮ್ಮಂದಿರಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ದುರ್ಗಪ್ಪ ಭೀಮಪ್ಪ ರವರ ಮಗ ಆಗಿದ್ದರು ಎಂದರೆ ನನಗೆ ಗೊತ್ತಿಲ್ಲ. ವಾದಿ ಸದರಿ ದುರ್ಗಪ್ಪನ ಮಗ ಆಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸಾಬಣ್ಣ ರವರು ಚಂದಪ್ಪನ ಮಗ ಆಗಿದ್ದರು ಎಂದರೆ ನನಗೆ ಗೊತ್ತಿಲ್ಲ. ರಾಮಣ್ಣ ಹಾಗೂ ಆಶಪ್ಪ ರವರು ಸಾಬಣ್ಣ ರವರ ಮಕ್ಕಳಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಸದರಿ ರಾಮಣ್ಣನ ಮಗಳಾಗಿರುತ್ತಾಳೆ ಎಂದರೆ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿ ಆಶಪ್ಪನ ಹೆಂಡತಿಯಾಗಿರುತ್ತಾರೆ ಎಂದರೆ ಸರಿ. 3 ರಿಂದ 7 ನೇ ಪ್ರತಿವಾದಿಯರು 2 ನೇ ಪ್ರತಿವಾದಿಯ ಮಕ್ಕಳಾಗಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಹೆಣ್ಣು ಮಕ್ಕಳಾಗಿರುವ 3, 5 ಮತ್ತು 7 ನೇ ಪ್ರತಿವಾದಿಯರ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. 8 ರಿಂದ 11 ನೇ ಪ್ರತಿವಾದಿಯರು ವಾದಿಯ ಸಹೋದರಿಯರಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

3. ದಾವಾ ಜಮೀನಿನ ಸರ್ವೆ ನಂಬರು ಗೊತ್ತಿದೇಯೇ ಎಂದರೆ ಸಾಕ್ಷಿಯು ನಾನು ಖರೀದಿಸಿದ ಜಮೀನಿನ ಸರ್ವೆ ನಂಬರು ಮಾತ್ರ ಗೊತ್ತಿದೆ ಎಂದು ನುಡಿಯುತ್ತಾರೆ. ನಾನು ಖರೀದಿಸಿದ ಜಮೀನು ಸರ್ವೆ ನಂ.63 ಹಾಗೂ ಕ್ಷೇತ್ರ 03 ಎಕರೆ 10 ಗುಂಟೆ ಇರುತ್ತದೆ. ಸದರಿ ಜಮೀನು ಹಿಂದೆ ಗಾಜರಕೋಟ ಸೀಮೆಯಲ್ಲಿ ಇತ್ತು, ಈಗ ರಾಂಪೂರ ಗ್ರಾಮದ ಸೀಮೆಯಲ್ಲಿ ಇದೆ ಎಂದು ಹೇಳುತ್ತಾರೆ. ದಾವಾ ಆಸ್ತಿಯ ಹಳೆಯ ಸರ್ವೆ ನಂಬರು ನನಗೆ ಗೊತ್ತಿಲ್ಲ. 1963-64 ರಲ್ಲಿ ದಾವಾ 02 ಎಕರೆ 18 ಗುಂಟೆ ಅಸ್ತಿಯ ಸರ್ವೆ ನಂ.998/ಎ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಆಗ ಸದರಿ ಜಮೀನು ಯಾರ ಹೆಸರಿನಲ್ಲಿ ಇತ್ತು ಎಂಬುದು ನನಗೆ ಗೊತ್ತಿಲ್ಲ. ದಾವಾ ಸರ್ವೆ ನಂ.63/ಆ ರಲ್ಲಿನ 32 ಗುಂಟೆ ಜಮೀನು ಹಿಂದೆ ವಾದಿಯ ತಂದೆ ದುರ್ಗಪ್ಪ ರವರ ಹೆಸರಿನಲ್ಲಿ ಇತ್ತು ಎಂದರೆ ನನಗೆ ಗೊತ್ತಿಲ್ಲ. 1963-64 ರಲ್ಲಿ ವಾದಿಯ ತಂದೆ ಸದರಿ 32 ಗುಂಟೆ ಜಮೀನಿನ ಮಾಲಿಕ ಹಾಗೂ ಕಬ್ಜೆದಾರ ಆಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಈ ಬಗ್ಗೆ ಮಾಹಿತಿ ಇದ್ದರೂ ಸಹ ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸದರಿ 32 ಗುಂಟೆ ಜಮೀನಿನ ಹಳೆಯ ಸರ್ವೆ ನಂ.998/ಆ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ.

4. ವಾದಿ ಹಾಗೂ 1 ರಿಂದ 11 ನೇ ಪ್ರತಿವಾದಿಯರು ಒಂದೇ ಕುಟುಂಬದ ಸದಸ್ಯರಾಗಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಾದಿ ಪ್ರತಿವಾದಿಯರು ಬೇರೆ ಬೇರೆ ಕುಟುಂಬದವರಾಗಿರುತ್ತಾರೆ ಎಂಬುದನ್ನು ತೋರಿಸಲು ದಾಖಲೆ ಹಾಜರು ಮಾಡಿದ್ದೇನೆ. ಸದರಿ ದಾಖಲೆ ಹಾಜರು ಮಾಡಿದ್ದೇನೆ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸದರಿ ವಾದಿ ಪ್ರತಿವಾದಿಯರು ಒಂದೇ ಕುಟುಂಬದ ಸದಸ್ಯರಾಗಿರುವುದು ಗೊತ್ತಿದ್ದರೂ ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಅನುಸೂಚಿ 2 ರ ಸರ್ವೆ ನಂ.63/ಆ ಜಮೀನು ವಾದಿಯರ ಕುಟುಂಬದ ಹಿರಿಯರ ಆಸ್ತಿ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ದಾವಾ ಸರ್ವೆ ನಂ.63/ಅ ಜಮೀನು ಸಹ ವಾದಿಯ ಕುಟುಂಬದ ಹಿರಿಯ ಆಸ್ತಿಯಾಗಿರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ, 2 ನೇ ಪ್ರತಿವಾದಿಯ ಹೆಸರಿನಲ್ಲಿತ್ತು ಅವರು ನನಗೆ ಮಾರಾಟ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಎರಡು ಜಮೀನುಗಳು ವಾದಿ ಹಾಗೂ 1 ರಿಂದ 11 ನೇ

ಪ್ರತಿವಾದಿಯರ ಜಂಟಿ ಕುಟುಂಬದ ಆಸ್ತಿಗಳಾಗಿದ್ದರೂ ಸಹ ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸದರಿ ವಾದಿ ಪ್ರತಿವಾದಿಯರು ಸದರಿ ಎರಡು ಜಮೀನುಗಳ ಜಂಟಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸಾಕ್ಷಿಯು ಸರಿಯಲ್ಲ, ನಾನು 01 ಎಕರೆ 18 ಗುಂಟೆ ಜಮೀನು ಸ್ವಾಧೀನದಲ್ಲಿ ಇದ್ದು ಉಳಿದ 01 ಎಕರೆ 32 ಗುಂಟೆ ಜಮೀನನ್ನು 13 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದೇನೆಂದು ನುಡಿಯುತ್ತಾರೆ.

5. 2 ನೇ ಪ್ರತಿವಾದಿ ಯಾವ ವರ್ಷದಲ್ಲಿ ಜಮೀನು ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿಯು ನನಗೆ ಇಸ್ವಿ ಗೊತ್ತಿಲ್ಲ ಎಂದು ಸಾಕ್ಷ ನುಡಿಯುತ್ತಾರೆ. ನಾನು 2 ನೇ ಪ್ರತಿವಾದಿಯಿಂದ 03 ಎಕರೆ 10 ಗುಂಟೆ ಜಮೀನು ಖರೀದಿಸಿದ್ದೇನೆ. ನಾನು ಜಮೀನು ಖರೀದಿಸುವಾಗ ಈ ದಾವೆ ನಡೆಯುತ್ತಿತ್ತು ಎಂದರೆ ಸರಿಯಲ್ಲ. ಈ ದಾವೆ ನಡೆಯುತ್ತಿದ್ದಾಗ ವಾದಿಗೆ ಗೊತ್ತಿಲ್ಲದೇ 2 ನೇ ಪ್ರತಿವಾದಿ ನನಗೆ ಜಮೀನು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ವಾದಿಗೆ ಮೋಸ ಮಾಡಿ ಪಾಲು ಕೊಡಬಾರದೆಂಬ ಉದ್ದೇಶದಿಂದ 2 ನೇ ಪ್ರತಿವಾದಿ ನನಗೆ ಜಮೀನು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ದಾವೆ ನಡೆಯುತ್ತಿದ್ದ ವಿಷಯ ನನಗೆ ಗೊತ್ತಿದ್ದರೂ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಮಾಡಿಕೊಂಡ ಖರೀದಿ ಪತ್ರ ಹಾಗೂ ಹಕ್ಕು ಬದಲಾವಣೆ ವಾದಿಯ ಮೇಲೆ ಬಂಧನಕಾರಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ವಾದಿ ಗಾಜರಕೋಟ ಗ್ರಾಮದ ಗ್ರಾಮ ಲೆಕ್ಕಾಧಿಕಾರಿಯ ಸಹಾಯಕನಾಗಿ ಕೆಲಸ ಮಾಡುತ್ತಿದ್ದು ಅವರಿಗೆ ದಾವಾ ಜಮೀನು ಮಾರಾಟದ ಸಂಪೂರ್ಣ ಮಾಹಿತಿ ಇತ್ತು ಎಂದು ನುಡಿಯುತ್ತಾರೆ. ಹಿಂದೆ ವಾದಿ ಗ್ರಾಮ ಸಹಾಯಕನಾಗಿ ಕೆಲಸ ಮಾಡುತ್ತಿದ್ದನು ಈಗ ಆತನಿಗೆ ಕಾಲು ನೋವು ಆಗಿರುವುದರಿಂದ ಆತನ ಮಗ ಸದರಿ ಕೆಲಸ ಮಾಡುತ್ತಿದ್ದಾನೆ. ವಾದಿ ಹಾಗೂ ಆತನ ಮಗನಿಗೆ ಖರೀದಿ ಪತ್ರದ ಮಾಹಿತಿ ಇರಲಿಲ್ಲ ಎಂದರೆ ಸರಿಯಲ್ಲ.

6. ನಾನು ರಾಂಪೂರ ಗ್ರಾಮದ ನಿವಾಸಿಯಾಗಿರುತ್ತೇನೆ. ರಾಂಪೂರ ಹಾಗೂ ಗಾಜರಕೋಟ ಗ್ರಾಮಗಳ ನಡುವೆ 03 ಕಿಮೀ ಅಂತರ ಇದೆ. ನಾನು ಖರೀದಿಸಿದ 03 ಎಕರೆ 10 ಗುಂಟೆ ಜಮಿನಿನ ಪೂರ್ವಕ್ಕೆ ಭಾಗಣ್ಣ ತಂದೆ ಬುಡ್ಡಪ್ಪ ರವರ ಜಮೀನು, ಪಶ್ಚಿಮಕ್ಕೆ ನರಸಪ್ಪ ತಂದೆ ಮಲ್ಲಪ್ಪ ರವರ ಜಮೀನು, ಉತ್ತರಕ್ಕೆ ತಮ್ಮಣ್ಣ ತಂದೆ ಮರೆಪ್ಪ ರವರ

ಜಮೀನು ಹಾಗೂ ದಕ್ಷಿಣಕ್ಕೆ ಸಾಬಣ್ಣ ತಂದೆ ಸಾಬಣ್ಣ ರವರ ಜಮೀನು ಇರುತ್ತದೆ. ನಾನು ಜಮೀನು ಖರೀದಿ ಮಾಡಿದಾಗಿನಿಂದ ನನಗೆ 2 ನೇ ಪ್ರತಿವಾದಿ ಹಾಗೂ ಅವರ ಮಕ್ಕಳ ಪರಿಚಯ ಇರುತ್ತದೆ. ನನಗೆ ಜಮೀನು ಖರೀದಿಸುವ ಪೂರ್ವದಿಂದಲೂ 2 ನೇ ಪ್ರತಿವಾದಿಯ ಪರಿಚಯ ಇತ್ತು ಎಂದರೆ ಸರಿಯಲ್ಲ. ವಾದಿಗೆ ಮೋಸ ಮಾಡುವ ಉದ್ದೇಶದಿಂದ ನಾನು ಹಾಗೂ 2 ನೇ ಪ್ರತಿವಾದಿ ಸೇರಿ ಖರೀದಿ ಪತ್ರ ಮಾಡಿಕೊಂಡಿದ್ದೇವೆಂದರೆ ಸರಿಯಲ್ಲ. ನಾನು ಕಾನೂನು ಬಾಹೀರವಾಗಿ 2 ನೇ ಪ್ರತಿವಾದಿಯಿಂದ ಜಮೀನು ಖರೀದಿಸಿ ದಾವೆಯಲ್ಲಿ ನನಗೆ ವ್ಯತಿರಿಕ್ತ ಆದೇಶವಾಗಬಹುದು ಎಂದು 13 ನೇ ಪ್ರತಿವಾದಿಗೆ ಜಮೀನು ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈ ದಾವೆ ನಡೆಯುತ್ತಿರುವ ವಿಷಯ ಗೊತ್ತಾದ ನಂತರ ನಾನು 13 ನೇ ಪ್ರತಿವಾದಿಗೆ ಜಮೀನು ಮರಾಟ ಮಾಡಿದ್ದೇನೆಂದರೆ ಸರಿಯಲ್ಲ. ವಾದಿ ಹಾಗೂ 1 ರಿಂದ 11 ನೇ ಪ್ರತಿವಾದಿಯರ ನಡುವೆ ವಿಭಾಗ ಆಗಿಲ್ಲ ಎಂಬುದು ಗೊತ್ತಿದ್ದರೂ ಆಸ್ತಿ ಖರೀದಿ ಮಾಡಿದ್ದೇನೆಂದರೆ ಸರಿಯಲ್ಲ. 2 ನೇ ಪ್ರತಿವಾದಿಗೆ ದಾವಾ ಜಮೀನು ಮಾರಾಟ ಮಾಡುವ ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ.

7. ದುರ್ಗಪ್ಪ ತೀರಿಕೊಂಡ ನಂತರ ದಾವಾ 32 ಗುಂಟೆ ಜಮೀನಿನ ಖಾತೆ ವಾದಿಯ ಹೆಸರಿಗೆ ವರ್ಗಾವಣೆ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ದಾವಾ 02 ಎಕರೆ 18 ಗುಂಟೆ ಜಮೀನಿನ ಖಾತೆಯನ್ನು 2 ನೇ ಪ್ರತಿವಾದಿಯ ಗಂಡ ವಾದಿಗೆ ಗೊತ್ತಿಲ್ಲದೆ ತನ್ನ ಹೆಸರಿಗೆ ವರ್ಗಾವಣೆ ಮಾಡಿಕೊಂಡಿದರು ಎಂದರೆ ಸರಿಯಲ್ಲ. ತನ್ನ ಗಂಡನ ತೀಡಿಕೊಂಡ ನಂತರ 2 ನೇ ಪ್ರತಿವಾದಿ ತನ್ನ ಹೆಸರಿಗೆ ಖಾತಾ ವರ್ಗಾವಣೆ ಮಾಡಿಕೊಂಡಿದ್ದರು ಎಂದರೆ ಸಾಕ್ಷಿಯು 2 ನೇ ಪ್ರತಿವಾದಿಯ ಹೆಸರಿನಲ್ಲಿದ್ದಾಗ ನಾನು ಜಮೀನು ಖರೀದಿಸಿದ್ದೇನೆಂದು ನುಡಿಯುತ್ತಾರೆ. 2 ನೇ ಪ್ರತಿವಾದಿ ಹಕ್ಕು ಬದಲಾವಣೆ ಮಾಡಿಕೊಂಡ ಕಾರಣ ದಾವಾ ಹೂಡುವ ಕಾರಣ ಉಂಟಾಗಿರುತ್ತದೆ ಎಂದರೆ ಸರಿಯಲ್ಲ. ನಿಡಿ-20 ರಿಂದ 24 ರಲ್ಲಿನ ಆಸ್ತಿಗಳಿಗೆ ಸಂಬಂಧಿಸಿದಂತೆ ಪ್ರತಿವಾದ ಪತ್ರದಲ್ಲಿ ಯಾವುದೇ ಅಂಶ ಬರೆಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಉದ್ದೇಶ ಪೂರ್ವಕವಾಗಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

(8 ರಿಂದ 11 ನೇ ಪ್ರತಿವಾದಿಯರ ಪರವಾಗಿ ಈ ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವಂತೆ ಶ್ರೀ ಡಿ.ಎಂ ವಕೀಲರು ಕೋರಿಕೊಂಡಿದ್ದು, ಕೋರಿಕೆಯನ್ನು ಮನ್ನಿಸಲಾಗಿರುತ್ತದೆ.)

ಮರು ವಿಚಾರಣೆಃ ಇಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ